# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 947

**ಸದಸ್ಯರ ಹೆಸರು** : ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ)

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

**ಉತ್ತರಿಸುವ ದಿನಾಂಕ** : 14.03.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹ ಲಕ್ಷ್ಮೀ ಯೋಜನೆ ಅನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕುಟುಂಬಗಳು ಈ ಯೋಜನೆಯಡಿಯಲ್ಲಿ ನೋಂದಾಯಿಸಲಾಗಿದೆ; ಒಟ್ಟು ಈವರೆಗೆ ಎಷ್ಟು ಕಂತುಗಳನ್ನು ಬಿಡುಗಡೆ ಮಾಡಲಾಗಿದೆ; ಈವರೆಗೆ ಬಿಡುಗಡೆ ಮಾಡಿದ ಒಟ್ಟು ಮೊತ್ತ ಎಷ್ಟು; (ವಿವರ ನೀಡುವುದು) | ಗೃಹಲಕ್ಷ್ಮೀ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ-2025ರ ಅಂತ್ಯಕ್ಕೆ 3,74,687 ಫಲಾನುಭವಿಗಳು ನೋಂದಣಿಯಾಗಿರುತ್ತಾರೆ.<br><br>ಆಗಸ್ಟ್-2023ರ ಮಾಹೆಯಿಂದ ಡಿಸೆಂಬರ್-2024ರ ಮಾಹೆಯವರೆಗೆ ಒಟ್ಟು 17 ಕಂತು (ಪ್ರತಿ ಫಲಾನುಭವಿಗೆ ರೂ. 2,000/-ರಂತೆ ಒಟ್ಟು ರೂ.34,000/-) ಗಳ ಧನಸಹಾಯ ಪಾವತಿ ಮಾಡಲಾಗಿದೆ. ಈವರೆವಿಗೂ ರೂ.1098.60 ಕೋಟಿಗಳ ಧನಸಹಾಯವನ್ನು ಪಾವತಿ ಮಾಡಲಾಗಿದೆ. ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಗೃಹಲಕ್ಷ್ಮೀ ಯೋಜನೆಗೆ ನೋಂದಾಯಿಸಲು ರೇಷನ್‌ಕಾರ್ಡ್‌ಗಳಲ್ಲಿ ಹೆಸರು ಬದಲಾವಣೆ ಮತ್ತು ರೇಷನ್ ಕಾರ್ಡ್‌ಗಳನ್ನು ಅಮಾನತ್ತಿನಲ್ಲಿ ಇಟ್ಟಿರುವುದರಿಂದ ಬಹಳಷ್ಟು ಮಂದಿ ಫಲಾನುಭವಿಗಳಿಗೆ ಈ ಯೋಜನೆಯ ಪ್ರಯೋಜನ ದೊರಕದಿರುವುದು ನಿಜವೇ; (ಈ ಬಗ್ಗೆ ವಿವರ ನೀಡುವುದು) | ಸರ್ಕಾರದ ಆದೇಶದ ದಿನಾಂಕ: 06.06.2023 ರನ್ವಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿತರಿಸುವ ಅಂತ್ಯೋದಯ, BPL ಮತ್ತು APL ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಯು ಗೃಹಲಕ್ಷ್ಮೀ ಯೋಜನೆಯ ಅರ್ಹ ಫಲಾನುಭವಿಯಾಗಿರುತ್ತಾರೆ.<br><br>ತುರ್ತು ವೈದ್ಯಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅರ್ಹರಿಗೆ ಆದ್ಯತಾ ಪಡಿತರ ಚೀಟಿ ನೀಡಲು ಹಾಗೂ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ.<br><br>ಇ-ಶ್ರಮ್ ನೊಂದಾಯಿತ ಕಾರ್ಮಿಕರಿಗೆ ಹಾಗೂ ಬುಡಕಟ್ಟು ಜನಾಂಗದವರಿಗೆ ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರದ ಮಾನದಂಡಗಳ ವಿರುದ್ಧವಾಗಿ ಪಡಿತರ ಚೀಟಿ ಪಡೆದವರ ಮಾಹಿತಿಯನ್ನು ಕುಟುಂಬ ತಂತ್ರಾಂಶದಿಂದ ಆದಾಯ ತೆರಿಗೆ ಪಾವತಿದಾರರು, ವಾರ್ಷಿಕ ರೂ. 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯವುಳ್ಳವರು, ಸರ್ಕಾರಿ ನೌಕರರು, |

| | | |
|---|---|---|
| | | ಮೃತರು ಮತ್ತು 6 ತಿಂಗಳಿನಿಂದ ಪಡಿತರವನ್ನು ಪಡೆಯದೇ ಇರುವ ಆದ್ಯತಾ ಪಡಿತರ ಚೀಟಿದಾರರ ಮಾಹಿತಿಯನ್ನು ಪಡೆಯಲಾಗಿರುತ್ತದೆ. ಇದರಲ್ಲಿ ಮೃತ ಫಲಾನುಭವಿಗಳ ಹೆಸರನ್ನು ತಂತ್ರಾಂಶದಿಂದ ತೆಗೆದುಹಾಕಲಾಗಿದ್ದು, ಉಳಿದ ಫಲಾನುಭವಿಗಳನ್ನು ಅಮಾನತ್ತು/ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿತ್ತು.<br><br>ದಿನಾಂಕ: 22-11-2024ರ ಪತ್ರದಲ್ಲಿ ನೀಡಿದ ನಿರ್ದೇಶನದಂತೆ ರಾಜ್ಯದಲ್ಲಿ ಆದಾಯ ತೆರಿಗೆ ಪಾವತಿದಾರರು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರುಸ್ಥಾಪಿಸಲಾಗಿರುತ್ತದೆ. |
| ಇ) | ಗೃಹಲಕ್ಷ್ಮೀ ಯೋಜನೆಯಲ್ಲಿ ಯಾವ ಯಾವ ಕಾರಣಕ್ಕಾಗಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ; (ವಿವರ ನೀಡುವುದು) | ಸರ್ಕಾರದ ಆದೇಶದ ದಿನಾಂಕ: 06.06.2023ರನ್ವಯ<br>i. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ<br>ii. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ GST returns ಸಲ್ಲಿಸುವವರಾಗಿದ್ದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅರ್ಹರಾಗಿರುವುದಿಲ್ಲ. |
| ಈ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆ ಅನ್ವಯ ನೋಂದಾಯಿಸಿದ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | ಗೃಹಲಕ್ಷ್ಮಿ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 3,74,687 ಫಲಾನುಭವಿಗಳು ನೋಂದಣಿಯಾಗಿರುತ್ತಾರೆ. ವಿವರ ಈ ಕೆಳಕಂಡಂತಿದೆ. |

| ಜಿಲ್ಲೆ | SC | ST | OTHERS | ಒಟ್ಟು |
|---|---|---|---|---|
| ದಕ್ಷಿಣ ಕನ್ನಡ | 25,359 | 14,607 | 3,34,721 | 3,74,687 |

**ಸಂಖ್ಯೆ: ಮಮಇ 62 ಮಮಅ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 947**

| ಕ್ರ. ಸಂ. | ಜಿಲ್ಲೆ | ಮಾಹೆ | ಯಶಸ್ವಿಯಾಗಿ ಧನಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ | ಪಾವತಿಸಲಾದ ಮೊತ್ತ (ರೂ. ಗಳಲ್ಲಿ) |
|---|---|---|---|---|
| 1 | ದಕ್ಷಿಣ ಕನ್ನಡ | ಆಗಸ್ಟ್-2023 | 307066 | 614132000 |
| | | ಸೆಪ್ಟೆಂಬರ್-2023 | 321365 | 642730000 |
| | | ಅಕ್ಟೋಬರ್-2023 | 326471 | 652942000 |
| | | ನವಂಬರ್-2023 | 328828 | 657656000 |
| | | ಡಿಸೆಂಬರ್-2023 | 336051 | 672102000 |
| | | ಜನವರಿ-2024 | 341118 | 682236000 |
| | | ಫೆಬ್ರುವರಿ-2024 | 347356 | 694712000 |
| | | ಮಾರ್ಚ್-2024 | 30965 | 61930000 |
| | | ಏಪ್ರಿಲ್-2024 | 348548 | 697096000 |
| | | ಮೇ-2024 | 348548 | 697096000 |
| | | ಜೂನ್-2024 | 351773 | 703546000 |
| | | ಜುಲೈ-2024 | 352640 | 705280000 |
| | | ಆಗಸ್ಟ್-2024 | 328618 | 657236000 |
| | | ಸೆಪ್ಟೆಂಬರ್-2024 | 354394 | 708788000 |
| | | ಅಕ್ಟೋಬರ್-2024 | 355263 | 710526000 |
| | | ನವಂಬರ್-2024 | 356391 | 712782000 |
| | | ಡಿಸೆಂಬರ್-2024 | 357595 | 715190000 |
| | | | ಒಟ್ಟು | **1098,59,80,000** |